| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**255/2025** | |
| ಡಿ.ಡಬ್ಲ್ಯು-**1** | |
| | |
| ಆರೋಪಿಯ ಹೆಸರು | ಪ್ರಮಿಳಾದೇವಿ ಧಾಳಿ ಅಲಿಯಾಸ ಮಾಳಗಿ |
| ಗಂಡನ ಹೆಸರು | ಹರೀಶ್ |
| ವಯಸ್ಸು | **59** ವರ್ಷ |
| ಉದ್ಯೋಗ | ಶಿಕ್ಷಕಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಧುರಖಂಡಿ |
| ವಾಸಸ್ಥಳ | ರಾಮೇಶ್ವರ ಕಾಲೋನಿ, ಜಮಖಂಡಿ |

<u>ದಿನಾಂಕ **24.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆ:- ಆರೋಪಿ ಪರ ಶ್ರೀ.ವಿ ಬಿ ಟಿ ವಕೀಲರಿಂದ:-</u>

ಫಿರ್ಯಾದುದಾರರು ನನ್ನ ಸಂಬಂಧಿಕರಾಗಿದ್ದರಿಂದ ಪರಿಚಯವಿರುತ್ತಾರೆ. ದಿನಾಂಕ 20.07.2021 ರಂದು ನನ್ನ ಗಂಡ ಮರಣ ಹೊಂದಿರುತ್ತಾರೆ. ನನ್ನ ಗಂಡನ ಮರಣಾ ನಂತರದ 9-10 ದಿನಗಳು ಆದ ಮೇಲೆ ಫಿರ್ಯಾದುದಾರರು ನಮ್ಮ ಮನೆಗೆ ಬಂದು ನಿನ್ನ ಗಂಡ ನನ್ನಿಂದ ರೂ.75,000/- ಹಣ ಪಡೆದುಕೊಂಡಿರುತ್ತಾನೆ, ಅದನ್ನು ವಾಪಸ್ಸು ಕೊಡಿ ಎಂದು ನನ್ನನ್ನು ಕೇಳಿರುತ್ತಾರೆ. ನಮಗೆ ಹೇಳದೇ ಏಕೆ ಹಣ ಕೊಟ್ಟಿರುತ್ತೀರಿ ಎಂದು ಫಿರ್ಯಾದುದಾರರನ್ನು ನಾನು ಕೇಳಿದಾಗ, ಫಿರ್ಯಾದುದಾರರು ಅವರು ಹಣ ನನ್ನಿಂದ ಪಡೆದಿರುತ್ತಾರೆ, ನೀವು ವಾಪಸ್ ಕೊಡಬೇಕು ಎಂದು ನನಗೆ ಹೇಳಿರುತ್ತಾರೆ. ಆದ್ದರಿಂದ ನಾನು ಮತ್ತು ನನ್ನ ಮಕ್ಕಳು ಒಪ್ಪಿ ಸದರಿ ಹಣವನ್ನು ಫಿರ್ಯಾದುದಾರರಿಗೆ ಮರುಪಾವತಿ ಮಾಡುವುದಾಗಿ ಹೇಳಿ ಕಾಲಾವಕಾಶ ಪಡೆದಿರುತ್ತೇವೆ.

2. ನನ್ನ ಮಗನಾದ ಪವನ್ ಈತನು ಫೋನ್ ಪೇ ಮೂಲಕ ರೂ.25,000/-, ರೂ.10,000/-, ರೂ.5,000/- ಮತ್ತು ರೂ.3,000/- ಒಟ್ಟು ರೂ.43,000/- ಹಣವನ್ನು ಫಿರ್ಯಾದುದಾರರಿಗೆ ಪಾವತಿ ಮಾಡಿರುತ್ತಾನೆ. ಜನೇವರಿ-2023 ರಲ್ಲಿ ನಾನು ರೂ.32,000/- ನಗದು ಹಣವನ್ನು ಫಿರ್ಯಾದುದಾರರಿಗೆ ಕೊಟ್ಟಿರುತ್ತೇನೆ. ಸದರಿ ಮೊತ್ತದ ಹಣವನ್ನು ಮರುಪಾವತಿ ಮಾಡಿದ ನಂತರ ನಾನು ನೀಡಿರುವ ಚೆಕ್ ಮತ್ತು ಖಾಲಿ ಬಾಂಡ್ ಪೇಪರ್ ಮರಳಿ ನೀಡುವಂತೆ ಫಿರ್ಯಾದುದಾರರಿಗೆ ಕೇಳಿರುತ್ತೇನೆ. ನೀವು ನನಗೆ ಇನ್ನು ಹಣ ಕೊಡುವುದಿದೆ ಎಂದು ಹೇಳಿ, ಸದರಿ ಚೆಕ್ ಮತ್ತು ಖಾಲಿ ಬಾಂಡ್ ಪೇಪರ್ ತನ್ನ ಬಳಿಯೇ ಇಟ್ಟುಕೊಂಡು, ಈಗ ಈ ಖಾಸಗಿ ದೂರನ್ನು ಸಲ್ಲಿಸಿರುತ್ತಾನೆ.

3. ಈಗ ಸಾಕ್ಷಿಯು ಎರಡು ಪೇ ಸ್ಲಿಪ್‌ಗಳ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ಆದಾಯ ತೆರಿಗೆ ಪಾವತಿಸಿದ ಕುರಿತು ಎರಡು ದಾಖಲೆಗಳ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು

ಕ್ರಮವಾಗಿ ನಿಡಿ-3 ಮತ್ತು 4 ಎಂದು ಗುರುತಿಸಲಾಯಿತು. ಪವನ್ ಧಾಳಿ ಇವರ ಆದಾಯ ಪ್ರಮಾಣ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ವೇತನ ಪ್ರಮಾಣ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-6 ಎಂದು ಗುರುತಿಸಲಾಯಿತು. 4 ಗಣಕೀಕೃತ ಸ್ಟೇಟಮೆಂಟ್ ಆಫ್ ಅಕೌಂಟನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-7 ರಿಂದ 10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಫಿರ್ಯಾದುದಾರರ ಪರ ವಕೀಲರಿಂದಃ-

(ಫಿರ್ಯಾದುದಾರರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ. ಆದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2025.12.24 17:02:19 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ